ಹೆಚ್ಚುವರಿ ದಿವಾಣಿ ನ್ಯಾಯಾಧೀಶರ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ., ರೋಣ

ಉಪಸ್ಥಿತರುಃ–ಶ್ರೀ. ವಿಜಯಕುಮಾರ್ ಎನ್, ಬಿ.ಎ., ಎಲ್ಎಲ್.ಬಿ

ಹೆಚ್ಚುವರಿ ದಿವಾಣಿ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ.,
ರೋಣ.

ದಿನಾಂಕ 03 ನೇ ಜೂನ್ ಮಾಹೆಯ 2026 ನೇ ಇಸವಿ

ಅಸಲು ದಾವೆ ಸಂಖ್ಯೆ 574/2023

ವಾದಿ – **ಕರ್ನಾಟಕ ವಿಕಾಸ ಗ್ರಾಮೀಣ ಬ್ಯಾಂಕ್**
ಮುಖ್ಯ ಕಚೇರಿ ಬೆಳಗಾವಿ ರಸ್ತೆ ಧಾರವಾಡ,
ಪ್ರತಿನಿಧಿಸುವವರು ಹಿರಿಯ ಶಾಖಾ ವ್ಯವಸ್ಥಾಪಕರು
ಭೂಶಯ್ಯ ತಂದೆ ಸೈದುಲ್ಲು ಕೊಯ
ಪ್ರಾಯ 37 ವರ್ಷ, ಸಾ ರೋಣ.
ಶಾಖೆ ರೋಣ, ತಾಃ ರೋಣ, ಜಿಃ ಗದಗ.
(ವಾದಿ ಪರ ಶ್ರೀ. ಎಲ್.ಎನ್.ಬಿ., ವಕೀಲರು)

ವಿರುದ್ಧ

ಪ್ರತಿವಾದಿಯರು – **1. ದಸ್ತಗಿರಿಸಾಬ ತಂದೆ ತಾಜುದ್ದೀನ್**
ಉರ್ಫ ತಾಜುಸಾಬ ಆಳಗುಂಡಿ
ವಯಾಃ 38 ವರ್ಷ, ಉಃ ವ್ಯಾಪಾರ,
ಸಾಃ ಜನತಾ ಪ್ಲಾಟ್,ರೋಣ,
ರೋಣ, ತಾಃ ರೋಣ, ಜಿಃಗದಗ.

2. ಖಾದೀರಸಾಬ ತಂದೆ ಕಾಶಿಮಸಾಹೇಬ ಸಂಕನೂರ,
ವಯಾಃ 43 ವರ್ಷ, ಉಃ ವ್ಯಾಪಾರ,
ಸಾಃ ಪಿ.ಎಲ್.ಡಿ ಬ್ಯಾಂಕ್ ಹತ್ತಿರ, ಗೌಡರ ಪ್ಲಾಟ್
ನವಲಗುಂದ ರಸ್ತೆ ರೋಣ,
ರೋಣ, ತಾಃ ರೋಣ, ಜಿಃಗದಗ.

(**1 ನೇ ಪ್ರತಿವಾದಿ** ಏಕಪಕ್ಷೀಯ)

(2 ನೇ ಪ್ರತಿವಾದಿಯ ಪರ ಶ್ರೀ ಎಫ್.ಎಂ.ಬಿ., ವಕೀಲರು)

ದಾವೆಯು ಹೂಡಿದ ದಿನಾಂಕ	-	20/12/2023
ದಾವೆಯ ಸ್ವರೂಪ	-	ಹಣ ಮರುಪಾವತಿಗಾಗಿ ದಾವೆ.
ಸಾಕ್ಷಿಗಳ ವಿಚಾರಣೆ ಪ್ರಾರಂಭವಾದ ದಿನಾಂಕ	-	24/09/2025
ಸಾಕ್ಷಿಗಳ ವಿಚಾರಣೆ ಮುಕ್ತಾಯವಾದ ದಿನಾಂಕ	-	24/09/2025
ತೀರ್ಪು ನೀಡಿದ ದಿನಾಂಕ	-	03/06/2026
ಒಟ್ಟು ಅವಧಿ	-	ವರ್ಷ ತಿಂಗಳು ದಿನಗಳು 02 05 15

VIJAYKUMAR N

Digitally signed by VIJAYKUMAR N
Date: 2026.06.03 18:08:59 +0530

ಹೆಚ್ಚುವರಿ ದಿವಾಣಿ ನ್ಯಾಯಧೀಶರು ಹಾಗೂ
ಜೆ.ಎಂ.ಎಫ್.ಸಿ., ರೋಣ.

ತೀರ್ಪು

ವಾದಿಯು ಪ್ರತಿವಾದಿಯವರ ವಿರುದ್ಧ ಹಣದ ಮರುಪಾವತಿಯ ಪರಿಹಾರವನ್ನು ಕೋರಿ ದಾವೆಯನ್ನು ಹೂಡಿರುತ್ತಾರೆ.

2. **ವಾದಿಯ ವಾದಪತ್ರದ ಸಂಕ್ಷಿಪ್ತ ಸಾರಾಂಶ ಈ ಕೆಳಗಿನಂತಿದೆ :**

ವಾದಿಯು ಒಂದು ಬ್ಯಾಂಕ್ ಆಗಿದ್ದು, ಸದರಿ ಬ್ಯಾಂಕಿನ ಮುಖ್ಯ ಕಚೇರಿ ಬೆಳಗಾವಿ ರಸ್ತೆ ಧಾರವಾಡದಲ್ಲಿಯು ಸಹ ಇರುತ್ತದೆ ಹಾಗೂ ಸದರಿ ಬ್ಯಾಂಕಿನ ಶಾಖೆಯು ರೋಣದಲ್ಲಿಯು ಸಹ ಇರುತ್ತದೆ. ಪ್ರಸ್ತುತ ದಾವೆಯಲ್ಲಿ 1 ನೇ ಪ್ರತಿವಾದಿಯವರಿಗೆ 2 ನೇ ಪ್ರತಿವಾದಿಯವರು ಜಾಮೀನುದಾರರಾಗಿರುತ್ತಾರೆ. ಪ್ರಸ್ತುತ ದಾವೆಯಲ್ಲಿ 1 ನೇ ಪ್ರತಿವಾದಿಯು ದಿನಾಂಕ 03.02.2015 ರಂದು ವ್ಯಾಪಾರದ ಉದ್ದೇಶಕ್ಕಾಗಿ ರೂ.1,50,000/- ಗಳ ಸಾಲವನ್ನು 1 ನೇ ಪ್ರತಿವಾದಿಯು ಅರ್ಜಿಯನ್ನು ಸಲ್ಲಿಸಿ ವಾರ್ಷಿಕ ಶೇಕಡಾ 14.50% ಬಡ್ಡಿಗೆ ಒಪ್ಪಿ ಕರಾರನ್ನು ಮಾಡಿ ಕೊಟ್ಟಿರುತ್ತಾರೆ. ಈಗಿನ ಬಡ್ಡಿ ದರವು ಶೇಕಡಾ 15.5% ಆಗಿರುತ್ತದೆ. ಸದರಿ 1 ನೇ ಪ್ರತಿವಾದಿಯು 36 ಕಂತುಗಳಲ್ಲಿ ಹಣ ಸಂದಾಯ ಮಾಡುವಂತೆ ಮತ್ತು ಜೊತೆಗೆ ಬಡ್ಡಿಯನ್ನು ಕಟ್ಟಲು ಒಪ್ಪಿಕೊಂಡಿರುತ್ತಾರೆ. ಪ್ರತಿವಾದಿಗೆ ಸಾಲದ ವಿವರವನ್ನು ಕನ್ನಡದಲ್ಲಿ ಓದಿ ಹೇಳಿದ್ದು, ಅದನ್ನು ಅರ್ಥಮಾಡಿಕೊಂಡು ಸಾಲವನ್ನು ಪಡೆದುಕೊಳ್ಳಲು ಬೇಕಾದಂತಹ ದಾಖಲಾತಿಗಳಿಗೆ ಸಹಿಯನ್ನು ಮಾಡಿರುತ್ತಾರೆ. ಪ್ರತಿವಾದಿಗಳು ಪಡೆದುಕೊಂಡಂತಹ ಸಾಲವು ಬಡ್ಡಿಯನ್ನು ಸೇರಿ ರೂ.4,85,431/- ಗಳು ಆಗಿರುತ್ತವೆ. ದಿನಾಂಕ 18/12/2023 ಕ್ಕೆ ರೂ. 4,85,431/- ಗಳನ್ನು ಬಾಕಿ ಉಳಿಸಿಕೊಂಡಿರುತ್ತಾರೆ. ನಂತರ ಪ್ರತಿವಾದಿಯವರು ಸಾಲವನ್ನು ಸಮಯಕ್ಕೆ ಸರಿಯಾಗಿ ಸಾಲವನ್ನು ಕಟ್ಟಿರುವುದಿಲ್ಲ. ಹಾಗಾಗಿ ವಾದಿಯ ಬ್ಯಾಂಕಿನವರು ಸಾಲದ ಖಾತೆಯನ್ನು ಹಾಗೇ

ಇಟ್ಟುಕೊಂಡಿದ್ದು, ದಿನಾಂಕ 18.12.2023 ರಂದು ಪ್ರತಿವಾದಿಯು ಪಡೆದುಕೊಂಡ ಸಾಲವು ಖರ್ಚುಗಳನ್ನು ಸೇರಿ ಒಟ್ಟು ರೂ.4,85,431/- ಬಾಕಿ ಉಳಿಸಿಕೊಂಡಿರುತ್ತಾರೆ. ದಿನಾಂಕ 22.06.2018 ಮತ್ತು 31.03.2021 ರಂದು ರೂ.1,50,000/-ಗಳಿಗೆ 2 ಸಾಲದ ತಿರುವಳಿ ಪತ್ರಗಳನ್ನು ಬರೆದುಕೊಟ್ಟಿರುತ್ತಾರೆ. ಹಾಗಾಗಿ ವ್ಯಾಜ್ಯ ಕಾರಣ ದಿನಾಂಕ 18.12.2023 ರಂದು ಉದ್ಭವವಾಗಿರುತ್ತದೆ. ದಿನಾಂಕ 18.12.2023 ರ ವರೆಗೆ ಬಡ್ಡಿಯನ್ನು ಸೇರಿ ರೂ.4,85,431/- ಆಗಿರುತ್ತದೆ. ಸದರಿ ಹಣಕ್ಕೆ ಶೇಕಡಾ 15.5 ರಷ್ಟು ಹಣವನ್ನು ದಿನಾಂಕ 20.12.2023 ರಿಂದ ಪ್ರತಿವಾದಿಯವರು ಸಂದಾಯ ಮಾಡುವ ದಿನಾಂಕದವರೆಗೆ ಬಾಕಿ ಹಣವನ್ನು ಮರುಪಾವತಿ ಮಾಡಬೇಕೆಂದು ದಾವೆಯನ್ನು ದಾಖಲು ಮಾಡಿರುತ್ತಾರೆ.

3. ವಾದಿಯವರು ಸಲ್ಲಿಸಿದ್ದ ವಾದ ಪತ್ರದ ಮೂಲಕ ಪ್ರತಿವಾದಿಯವರ ವಿರುದ್ಧ ದಾವೆಯನ್ನು ದಾಖಲು ಮಾಡಿಕೊಂಡು ಪ್ರತಿವಾದಿರವರಿಗೆ ದಾವಾ ಸಮನ್ಸ್ ಖುದ್ದು ಜಾರಿಯಾಗಿದ್ದರೂ ಸಹ 1 ನೇ ಪ್ರತಿವಾದಿಯವರು ನ್ಯಾಯಾಲಯಕ್ಕೆ ಹಾಜರಾಗಿರುವುದಿಲ್ಲ ಮತ್ತು ಸದರಿ ದಾವೆಗೆ ಸಂಬಂಧಿಸಿದಂತೆ ತಮ್ಮ ಪರವಾಗಿ ಪ್ರತಿವಾದ ಪತ್ರವನ್ನು ಸಲ್ಲಿಸಿರುವುದಿಲ್ಲ. ಆದ್ದರಿಂದ 1 ನೇ ಪ್ರತಿವಾದಿಯವರ ವಿರುದ್ಧ ಏಕಪಕ್ಷೀಯವಾಗಿ ದಾವೆಯನ್ನು ತೆಗೆದುಕೊಳ್ಳಲಾಗಿರುತ್ತದೆ. 2 ನೇ ಪ್ರತಿವಾದಿಯವರು ತಮ್ಮ ವಕೀಲರ ಮೂಲಕ

ನ್ಯಾಯಾಲಯಕ್ಕೆ ಹಾಜರಾಗಿರುತ್ತಾರೆ. ಆದರೆ ತಮ್ಮ ಪರವಾಗಿ ಪ್ರತಿವಾದ ಪತ್ರವನ್ನು ಹಾಜರುಪಡಿಸಿರುವುದಿಲ್ಲ.

4. ವಾದಿಯ ವಾದ ಪತ್ರದ ಸಂಗತಿಗಳನ್ನು ಪರಿಶೀಲಿಸಿದ ನಂತರ ಈ ನ್ಯಾಯಾಲಯವು ಈ ಕೆಳಕಂಡ ಅಂಶಗಳು ನ್ಯಾಯಾಲಯದ ಗಮನಕ್ಕೆ ಬಂದಿರುತ್ತದೆ.

ಃ ಅಂಶಗಳು ಃ

1. ವಾದಿಯು 1 ನೇ ಪ್ರತಿವಾದಿಗೆ ವ್ಯಾಪಾರದ ಅಭಿವೃದ್ಧಿಯ ಉದ್ದೇಶಕ್ಕಾಗಿ ಕರಾರು ಪತ್ರವನ್ನು ಬರೆದುಕೊಟ್ಟು ದಿನಾಂಕ 03.02.2015 ರಂದು ರೂ.1,50,000/-ಗಳನ್ನು ಪಡೆದಿರುವುದಾಗಿ ಮತ್ತು ಸದರಿ ಸಾಲವು ರೂ.4,85,431/-ಗಳು ಆಗಿರುತ್ತದೆ ಎಂದು ವಾದಿಯು ಸಾಬೀತುಪಡಿಸುತ್ತಾರೆಯೇ?
2. ವಾದಿಯು ದಿನಾಂಕ 20.12.2023 ರಿಂದ ಪ್ರತಿವಾದಿಯ ಸಂದಾಯದ ದಿನಾಂಕದವರೆಗೆ ರೂ. 4,85,431/- ಗಳನ್ನು ವಾರ್ಷಿಕ ಶೇಕಡಾ 15.50% ರಷ್ಟು ಬಡ್ಡಿಯಂತೆ ಪಡೆದುಕೊಳ್ಳಲು ಅರ್ಹರೇ?
3. ಯಾವ ಆದೇಶ ಅಥವಾ ಡಿಕ್ರಿ?

5. ವಾದಿಯು ತಮ್ಮ ದಾವೆಯನ್ನು ಸಾಬೀತು ಪಡಿಸಲು ವಾದಿಯು ತನ್ನನ್ನು ತಾನು ವಾದಿ ಸಾಕ್ಷಿ 1 ಎಂದು ವಿಚಾರಣೆಗೆ ಒಳಪಪಿಡಿಸಿಕೊಂಡಿದ್ದು, ತನ್ನ ಮುಖ್ಯ ವಿಚಾರಣೆಯ

ಬದಲಿಗೆ ಸಾಕ್ಷಿ ಪ್ರಮಾಣ ಪತ್ರವನ್ನು ಸಲ್ಲಿಸಿದ್ದು ತನ್ನ ಮೌಖಿಕ ಸಾಕ್ಷ್ಯದ ಸಮರ್ಥನೆಗಾಗಿ ನಿಪಿ 1 ರಿಂದ 11 ದಾಖಲಾತಿಗಳನ್ನು ಗುರುತಿಸಿಕೊಂಡಿರುತ್ತಾರೆ.

6. ವಾದಿ ಪರ ವಕೀಲರ ವಾದವನ್ನು ಆಲಿಸಲಾಯಿತು ಮತ್ತು ನ್ಯಾಯಾಲಯದ ಸಮ್ಮುಖದಲ್ಲಿರುವ ಈ ದಾವೆಗೆ ಸಂಬಂಧಿಸಿದ ದಾಖಲೆಗಳನ್ನು ಕೂಲಂಕಷವಾಗಿ ಪರಿಶೀಲಿಸಲಾಯಿತು.

7. ವಾದಿಯು ನೀಡಿದ ಸಾಕ್ಷ್ಯವನ್ನು ಪರಿಗಣಿಸಿ ಮತ್ತು ವಾದಿಯ ಪರ ವಕೀಲರು ಮಂಡಿಸಿದ ವಾದವನ್ನು ಆಲಿಸಿದ ನಂತರ ಈ ನ್ಯಾಯಾಲಯವು ಮೇಲ್ಕಂಡ ಅಂಶಗಳಿಗೆ ಈ ಕೆಳಕಂಡಂತೆ ಉತ್ತರಿಸುತ್ತಿದ್ದೇನೆ.

ಅಂಶ ಸಂಖ್ಯೆ 1 : ಸಕಾರಾತ್ಮಕವಾಗಿ

ಅಂಶ ಸಂಖ್ಯೆ 2 : ಭಾಗಶಃ ಸಕಾರಾತ್ಮಕವಾಗಿ

ಅಂಶ ಸಂಖ್ಯೆ 3 : ಈ ಕೆಳಕಂಡ ಕಾರಣಗಳಿಗಾಗಿ ಅಂತಿಮ ಆದೇಶದಂತೆ.

ಕಾರಣಗಳು

8. ಅಂಶ ಸಂಖ್ಯೆ.1ಃ– ಪ್ರಸ್ತುತ ದಾವೆಯನ್ನು ವಾದಿಯು ಪ್ರತಿವಾದಿಯ ವಿರುದ್ಧ ಹಣದ ಮರುಪಾವತಿಗಾಗಿ ದಾವೆಯನ್ನು ದಾಖಲಿಸಿಕೊಂಡಿದ್ದು, ವಾದಿಯು ತನ್ನ ವಾದ ಪತ್ರದಲ್ಲಿ ಹೇಳಿರುವ ಸಂಗತಿಗಳನ್ನು ತಮ್ಮ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ

ಪುನರುಚ್ಚರಿಸಿರುತ್ತಾರೆ. ಸಾಕ್ಷ್ಯಪ್ರಮಾಣ ಪತ್ರದ ಜೊತೆಗೆ ನಿಪಿ.1 ರಿಂದ 11 ದಾಖಲಾತಿಗಳನ್ನು ಗುರುತಿಸಿಕೊಂಡಿರುತ್ತಾರೆ.

9. ವಾದಿಯು ತನ್ನ ಮುಖ್ಯ ವಿಚಾರಣೆಯಲ್ಲಿ ಪ್ರತಿವಾದಿಯು ವ್ಯಾಪಾರದ ಉದ್ದೇಶಕ್ಕಾಗಿ ರೂ.1,50,000/-ರೂಪಾಯಿಗಳ ಸಾಲವನ್ನು ಪಡೆದುಕೊಳ್ಳಲು ಅರ್ಜಿಯನ್ನು ಸಲ್ಲಿಸಿರುತ್ತಾರೆ. ಪ್ರತಿವಾದಿಯು ಸಾಲದ ಕರಾರು ಪತ್ರವನ್ನು ವಾರ್ಷಿಕ ಶೇಕಡಾ 14.50% ರಂತೆ 36 ಕಂತುಗಳು ಮುಖಾಂತರ ಹಣವನ್ನು ಪಾವತಿಸಲು ಒಪ್ಪಿಕೊಂಡಿರುತ್ತಾರೆ. ಪ್ರತಿವಾದಿಗಳು ಪಡೆದುಕೊಂಡಂತಹ ಸಾಲವು ಬಡ್ಡಿಯನ್ನು ಸೇರಿ ರೂ.4,85,431/- ಗಳು ಆಗಿರುತ್ತವೆ. ದಿನಾಂಕ 18/12/2023 ಕ್ಕೆ ರೂ. 4,85,431/- ಗಳನ್ನು ಬಾಕಿ ಉಳಿಸಿಕೊಂಡಿರುತ್ತಾರೆ. ಹಾಗಾಗಿ ಪ್ರತಿವಾದಿಯವರು ಖರ್ಚನ್ನು ಸೇರಿ ರೂ.4,85,431/- ಗಳನ್ನು ದಿನಾಂಕ 20.12.2023 ರಿಂದ ಪ್ರತಿವಾದಿಗಳು ಸಂದಾಯ ಮಾಡುವ ದಿನಾಂಕದವರೆಗೆ ಶೇಕಡಾ 15.50% ರಷ್ಟು ಬಡ್ಡಿಯಂತೆ ಕೊಡಿಸಬೇಕೆಂದು ಕೇಳಿಕೊಂಡಿರುತ್ತಾರೆ.

10. ಪ್ರಸ್ತುತ ದಾವೆಯನ್ನು ವಾದಿಯು ಪ್ರತಿವಾದಿಗಳ ವಿರುದ್ಧ ಹಣದ ಮರುಪಾವತಿಗಾಗಿ ದಾಖಲು ಮಾಡಿರುತ್ತಾರೆ. ಪ್ರಸ್ತುತ ದಾವೆಯಲ್ಲಿ 1 ನೇ ಪ್ರತಿವಾದಿಗೆ ನ್ಯಾಯಾಲಯದಿಂದ ಸಮನ್ಸ್ ಜಾರಿಯಾದರೂ ಸಹ ನ್ಯಾಯಾಲಯಕ್ಕೆ ಹಾಜರಾಗಿರುವುದಿಲ್ಲ ಮತ್ತು 2 ನೇ ಪ್ರತಿವಾದಿಯವರು ನ್ಯಾಯಾಲಯಕ್ಕೆ ಹಾಜರಾಗಿ

ಪ್ರತಿವಾದ ಪತ್ರವನ್ನು ಸಹ ಸಲ್ಲಿಸಿರುವುದಿಲ್ಲ. ಹಾಗಿದ್ದರು ಸಹ ವಾದಿಯವರು ತಮ್ಮ ಪರವಾಗಿ ಡಿಕ್ರಿಯಾಗಬೇಕೆಂದು ಕೇಳಿರುವ ಅಂಶಗಳನ್ನು ಸಾಭೀತು ಪಡಿಸುವ ಹೊಣೆಗಾರಿಕೆ ವಾದಿಯವರ ಮೇಲೆ ಇರುತ್ತದೆ. ಹಾಗಾಗೀ ಪ್ರಸ್ತುತ ದಾವೆಯನ್ನು ವಾದಿಯು ಸಾಭೀತುಪಡಿಸಲೇಬೇಕಾಗುತ್ತದೆ. ಪ್ರತಿವಾದಿಗಳು ನ್ಯಾಯಾಲಯಕ್ಕೆ ಹಾಜರಾಗಲಿಲ್ಲ ಎನ್ನುವ ಕಾರಣದಿಂದ ವಾದಿಯು ತನ್ನ ಹೊಣೆಗಾರಿಕೆಯಿಂದ ತಪ್ಪಿಸಿಕೊಳ್ಳಲು ಸಾಧ್ಯವಿಲ್ಲ.

11. ಪ್ರಸ್ತುತ ದಾವೆಗೆ ಸಂಬಂಧಿಸಿದಂತೆ ವಾದಿಯವರು ತಮ್ಮ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದ ಜೊತೆಗೆ ನಿಪಿ.1 ರಿಂದ 11 ದಾಖಲಾತಿಗಳನ್ನು ಗುರುತಿಸಿಕೊಂಡಿರುತ್ತಾರೆ. ಸದರಿ ದಾಖಲಾತಿಗಳ ಪೈಕಿ ನಿಪಿ.1 ಪ್ರತಿವಾದಿಯವರು ಸಾಲವನ್ನು ಪಡೆದುಕೊಳ್ಳಲು ನೀಡಿದ ಸಾಲದ ಅರ್ಜಿಯಾಗಿರುತ್ತದೆ. ನಿಪಿ.2 1 ನೇ ಪ್ರತಿವಾದಿಯು ಬರೆದುಕೊಟ್ಟ ಕರಾರು ಪತ್ರ, ನಿಪಿ.3 2 ನೇ ಪ್ರತಿವಾದಿಯು ನೀಡಿರುವ ಜಾಮೀನು ಪತ್ರವಾಗಿರುತ್ತದೆ. ನಿಪಿ.4 1 ನೇ ಪ್ರತಿವಾದಿಗೆ ಹಣ ನೀಡಿದ ಬಗ್ಗೆ ರಶೀದಿಯಾಗಿರುತ್ತದೆ. ನಿಪಿ.5 ಮತ್ತು 6 ಎರಡು ಸಾಲದ ತಿರುವಳಿ ಪತ್ರಗಳಾಗಿರುತ್ತವೆ. ನಿಪಿ.7 ದಿನಾಂಕ 25.10.2022 ರಂದು ವಕೀಲರಿಂದ ನೀಡಿದ ಕಾನೂನು ತಿಳುವಳಿಕೆ ಪತ್ರ, ನಿಪಿ.8 ಮತ್ತು 9 ಎರಡು ಅಂಚೆ ರಸೀದಿಗಳಾಗಿರುತ್ತವೆ. ನಿಪಿ.10 1 ನೇ ಪ್ರತಿವಾದಿ ಖಾತೆಯ ತಖ್ತೆಯಾಗಿರುತ್ತದೆ. ನಿಪಿ.11 ಪತ್ರಿಕಾ ಪ್ರಕಟಣೆಯಾಗಿರುತ್ತದೆ.

12. ವಾದಿಯವರು ತಮ್ಮ ವಾದ ಪತ್ರದಲ್ಲಿ ಮತ್ತು ಮುಖ್ಯ ವಿಚಾರಣೆಯಲ್ಲಿ 1 ನೇ ಪ್ರತಿವಾದಿಯು ವ್ಯಾಪಾರದ ಉದ್ದೇಶಕ್ಕಾಗಿ ರೂ.1,50,000/- ಗಳನ್ನು ಸಾಲ ಕೇಳಿ ಅರ್ಜಿಯನ್ನು ಸಲ್ಲಿಸಿದ್ದು, ಪ್ರತಿವಾದಿಯು ಬ್ಯಾಂಕಿನ ನಿಬಂಧನೆಗಳಿಗೆ ಮತ್ತು ವಾರ್ಷಿಕ ಶೇಕಡಾ 14.50% ರಷ್ಟು ಬಡ್ಡಿಗೆ ಒಪ್ಪಿ ಸಾಲದ ಕರಾರು ಪತ್ರವನ್ನು ಮಾಡಿ ಕೊಟ್ಟು ಸಾಲವನ್ನು ಪಡೆದುಕೊಂಡಿರುತ್ತಾರೆ ಎಂದು ನುಡಿದಿರುತ್ತಾರೆ. ಹಾಗಾಗಿ ವಾದಿಯವರ ಪರವಾಗಿ ಗುರುತಿಸಿಕೊಂಡ ದಾಖಲಾತಿಗಳನ್ನು ಪರಿಶೀಲಿಸುವುದು ಅವಶ್ಯಕವಾಗಿರುತ್ತದೆ. ನಿಪಿ.1 ಸಾಲದ ಅರ್ಜಿಯಾಗಿದ್ದು, ನಿಪಿ.2 1 ನೇ ಪ್ರತಿವಾದಿಯ ಕರಾರು ಪತ್ರವಾಗಿರುತ್ತದೆ. ನಿಪಿ.3 ದಿನಾಂಕ 03.02.2015 ರಂದು 2 ನೇ ಪ್ರತಿವಾದಿಯು ಜಾಮೀನುದಾರನಾಗಿ ಸಹಿಯನ್ನು ಮಾಡಿರುವುದು ಕಂಡು ಬಂದಿರುತ್ತದೆ. ನಿಪಿ.4 1 ನೇ ಪ್ರತಿವಾದಿಗೆ ಹಣ ತಲುಪಿದ ಬಗ್ಗೆ ರಶೀದಿಯಾಗಿರುತ್ತದೆ ನಿಪಿ.5 ಮತ್ತು 6 ಎರಡು ಸಾಲದ ತಿರುವಳಿ ಪತ್ರಗಳಾಗಿದ್ದು, ನಿಪಿ.7 ಬ್ಯಾಂಕಿನವರು ಪ್ರತಿವಾದಿಗಳಿಗೆ ನೀಡಿದ ಕಾನೂನು ತಿಳುವಳಿಕೆ ಪತ್ರವಾಗಿದ್ದು, ನಿಪಿ.8 ಮತ್ತು 9 ಸದರಿ ಕಾನೂನು ತಿಳವಳಿಕೆ ಪತ್ರವನ್ನು ನೀಡಿದಾಗ ಅಂಚೆ ಇಲಾಖೆಯವರು ನೀಡಿದ ಅಂಚೆ ರಶೀದಿಗಳಾಗಿರುತ್ತವೆ. ನಿಪಿ.10 1 ನೇ ಪ್ರತಿವಾದಿಯ ಕರ್ನಾಟಕ ವಿಕಾಶ ಗ್ರಾಮೀಣ ಬ್ಯಾಂಕ್ ರೋಣ ಶಾಖೆಯ ತಖ್ತೆಯಾಗಿದ್ದು, ಸದರಿ ತಖ್ತೆಯಲ್ಲಿ ದಿನಾಂಕ 18.12.2023 ರಂದು ರೂ.4,84,931/- ಬಾಕಿ ಇರುವುದು

ಕಂಡು ಬಂದಿರುತ್ತದೆ. ಹಾಗಾಗಿ ವಾದಿಯವರ ಬ್ಯಾಂಕಿನಿಂದ 1 ನೇ ಪ್ರತಿವಾದಿಯು ಸಾಲವನ್ನು ಪಡೆದುಕೊಂಡಿರುವುದು ಸ್ಪಷ್ಟವಾಗಿ ಕಂಡು ಬಂದಿರುತ್ತದೆ.

13. 1 ನೇ ಪ್ರತಿವಾದಿಯು ಪ್ರಸ್ತುತ ದಾವೆಯಲ್ಲಿ ಸಮನ್ಸ ಜಾರಿಯಾದರು ಸಹ ನ್ಯಾಯಾಲಯಕ್ಕೆ ಹಾಜರಾಗಿರುವುದಿಲ್ಲ ಮತ್ತು 2 ನೇ ಪ್ರತಿವಾದಿಯವರು ನ್ಯಾಯಾಲಯಕ್ಕೆ ಹಾಜರಾದರು ಸಹ ವಾದಿಯವರು ಹೇಳಿರುವ ಸಂಗತಿಗಳನ್ನು ಅಲ್ಲಗಳೆದಿರುವುದಿಲ್ಲ ಮತ್ತು ವಾದಿಯವರ ಸಾಕ್ಷ್ಯಕ್ಕೆ ವಿರುದ್ಧವಾಗಿ ಯಾವುದೇ ಸಾಕ್ಷ್ಯವನ್ನು ನೀಡಿರುವುದಿಲ್ಲ. ವಾದಿಯವರು ಹಾಜರುಪಡಿಸಿರುವ ನಿಪಿ.2 ರೂ.1,50,000/- ಸಾಲವನ್ನು ಮರಳಿ ಪಾವತಿಸುವುದಕ್ಕಾಗಿ ನೀಡಿದ ಕರಾರು ಪತ್ರವಾಗಿರುತ್ತದೆ. ಹಾಗಾಗಿ ವಾದಿಯವರು ಪ್ರತಿವಾದಿಯವರಿಂದ ಹಣವನ್ನು ಮರುಪಾವತಿಸಬೇಕೆಂದು ಕೋರಿರುತ್ತಾರೆ.

14. ವಾದಿಯವರು ಹಾಜರುಪಡಿಸಿರುವ ದಾಖಲಾತಿಗಳನ್ನು ಕೂಲಕುಂಶವಾಗಿ ಪರಿಶೀಲಿಸಿದಾಗ 1 ನೇ ಪ್ರತಿವಾದಿಯು ವಾದಿಯ ಬ್ಯಾಂಕಿನಿಂದ ಸಾಲವನ್ನು ವ್ಯಾಪಾರದ ಉದ್ದೇಶಕ್ಕಾಗಿ ಸಾಲವನ್ನು ತೆಗೆದುಕೊಂಡಿರುವುದು ಕಂಡು ಬಂದಿದ್ದು, ಅದಕ್ಕೆ ಸಂಬಂಧಿಸಿದಂತೆ ಸಾಲ ಪಡೆದುಕೊಳ್ಳಲು ಅವಶ್ಯಕವಾಗಿ ಬೇಕಾದಂತಹ ದಾಖಲಾತಿಗಳನ್ನು ಸಹ ನೀಡಿ ಅದಕ್ಕೆ ಸಹಿಯನ್ನು ಮಾಡಿರುವುದು ಕಂಡು ಬಂದಿರುತ್ತದೆ. ಹಾಗಾಗಿ 1 ನೇ ಪ್ರತಿವಾದಿಯು ದಿನಾಂಕ 03.02,2015 ರಂದು ಸಾಲವನ್ನು ಪಡೆದುಕೊಂಡಿರುವುದು ಸಾಬೀತಾಗಿರುತ್ತದೆ ಮತ್ತು ನಿಪಿ.10 1 ನೇ ಪ್ರತಿವಾದಿಯ ಖಾತೆಯ ತಖ್ತೆಯನ್ನು

ಪರಿಶೀಲಿಸಿದಾಗ ದಿನಾಂಕ 18.12.2023 ರಂದು ರೂ.4,84,931 ಬಾಕಿ ಉಳಿಸಿಕೊಂಡಿರುವುದು ಕಂಡು ಬಂದಿರುತ್ತದೆ. ಸದರಿ ದಾವೆಯಲ್ಲಿ ನಿಪಿ.5 ಮತ್ತು 6 ಎರಡು ಸಾಲದ ತಿರುವಳಿ ಪತ್ರಗಳಾಗಿದ್ದು, ಸದರಿ ತಿರುವಳಿ ಪತ್ರಗಳಲ್ಲಿ ದಿನಾಂಕ 22.06.2018 ಮತ್ತು 31.03.2021 ರಂದು ಸಾಲಕ್ಕೆ ತಿರುವಳಿ ಪತ್ರಗಳನ್ನು ಬರೆದುಕೊಟ್ಟಿರುವುದರಿಂದ ಸದರಿ ದಾವೆಯು ಕಾಲಪರಿಮಿತಿಯ ಅಧಿನಿಯಮದ ಅಡಿಯಲ್ಲಿ ಇರುತ್ತದೆ. ಹಾಗಾಗಿ ಈ ಮೇಲ್ಕಂಡ ಚರ್ಚೆಯಿಂದ ಮತ್ತು ದಾಖಲಾತಿಗಳನ್ನು ಪರಿಶೀಲಿಸಿದ ನಂತರ ಅಂಶ 1 ನ್ನು ಸಕಾರಾತ್ಮಕವಾಗಿ ಉತ್ತರಿಸಲಾಗಿದೆ.

15. ಅಂಶ ಸಂಖ್ಯೆ 2ಃ- ವಾದಿಯು ಈ ಅಂಶಕ್ಕೆ ಸಂಬಂಧಿಸಿದಂತೆ ತನ್ನ ವಾದ ಪತ್ರದಲ್ಲಿ ಪ್ರತಿವಾದಿಗಳು ಸದರಿ ಸಾಲಕ್ಕೆ ಬಡ್ಡಿ ದರವು ಶೇಕಡಾ 14.50% ದಂಡದ ಬಡ್ಡಿಯಂತೆ ಒಪ್ಪಿಕೊಂಡಿರುತ್ತಾರೆ ಎಂದು ಹೇಳಿರುತ್ತಾರೆ. ವಾದಿಯು ರೂ.4,85,431/- ಗಳನ್ನು ವಾರ್ಷಿಕ ಶೇಕಡಾ 14.50% ರಂತೆ ನೀಡಬೇಕು ಎಂದು ಹೇಳಿರುತ್ತಾರೆ. ವಾದಿಯು ತನ್ನ ವಾದ ಪತ್ರದಲ್ಲಿ 1 ನೇ ಪ್ರತಿವಾದಿಯು ಪ್ರಸ್ತುತ ಸಾಲವನ್ನು ವ್ಯಾಪಾರ ಮಾಡಲು ಪಡೆದುಕೊಂಡಿರುತ್ತಾರೆಂದು ಹೇಳಿರುತ್ತಾರೆ. ಸದರಿ ವ್ಯಾಪಾರದ ಸಾಲವು ಯಾವುದೇ ವಾಣಿಜ್ಯ ವ್ಯವಹಾರಕ್ಕೆ ಸಂಬಂಧಿಸಿರುವುದಿಲ್ಲ. ವಾಣಿಜ್ಯ ನ್ಯಾಯಾಲಯಗಳ ಅಧಿನಿಯಮದಡಿಯಲ್ಲಿ ಹೇಳಿರುವ ವ್ಯವಹಾರಗಳು ಮಾತ್ರ ವಾಣಿಜ್ಯ ವ್ಯವಹಾರಗಳು ಆಗಿರುತ್ತವೆ. ದಾವೆಯನ್ನು ದಾಖಲು ಮಾಡಿದ ದಿನದಿಂದ ಡಿಕ್ರಿಯ ದಿನಾಂಕವರೆಗಿನ ಮತ್ತು

ಡಿಕ್ರಿಯ ದಿನಾಂಕದಿಂದ ಸಂದಾಯದ ದಿನಾಂಕದವರೆಗಿನ ಸಂದಾಯದ ಆದೇಶವು ನ್ಯಾಯಾಲಯದ ವಿವೇಚನಾಧಿಕಾರವಾಗಿರುತ್ತದೆ. ಪ್ರಸ್ತುತ ಪ್ರತಿವಾದಿಯವರು ಸಾಲವನ್ನು ಪಡೆದುಕೊಳ್ಳುವಾಗ ನೀಡಿದ ನಿಪಿ-1 ಸಾಲದ ಅರ್ಜಿಯನ್ನು ಪರಿಶೀಲಿಸಿದಾಗ ವ್ಯಾಪಾರಕ್ಕೆ ಎಂದು ನಮೂದು ಆಗಿರುತ್ತದೆ. ಹಾಗಾಗೀ ಪ್ರಸ್ತುತ ದಾವೆಯಲ್ಲಿ ವಾದಿಯವರು ಕೇಳಿದ ಬಡ್ಡಿ ದರವನ್ನು ಪಡೆದುಕೊಳ್ಳಲು ಸಾಧ್ಯವಾಗುವುದಿಲ್ಲ. ವಾದಿಯು ತಮ್ಮ ವಾದ ಪತ್ರದಲ್ಲಿ ಕೇಳಿರುವ ಇನ್ನಿತರ ಪರಿಹಾರಗಳನ್ನು ಪಡೆದುಕೊಳ್ಳಲು ಅರ್ಹರಿರುವುದಿಲ್ಲ. ಪ್ರತಿವಾದಿಯವರು ರೂ.4,85,431/- ಗಳಿಗೆ ವಾರ್ಷಿಕ ಶೇಕಡಾ 6% ರಂತೆ ಬಡ್ಡಿ ದರವನ್ನು ನೀಡಲು ಹೊಣೆಗಾರರಾಗಿರುತ್ತಾರೆ. ಹಾಗಾಗಿ ಈ ಮೇಲ್ಕಂಡ ಚರ್ಚೆಗಳಿಂದ ಈ ಮೇಲ್ಕಂಡ ಅಂಶವನ್ನು ಭಾಗಶಃ ಸಕಾರಾತ್ಮಕವಾಗಿ ಉತ್ತರಿಸಲಾಗಿದೆ.

16. <u>ಅಂಶ ಸಂಖ್ಯೆ 3</u> ಃ- ಅಂಶ ಸಂಖ್ಯೆ 1 ಮತ್ತು 2 ರ ಮೇಲಿನ ಚರ್ಚೆಯಿಂದ ಈ ಕೆಳಗಿನಂತೆ ಆದೇಶಿಸುತ್ತಿದ್ದೇನೆ.

ಃಃ **<u>ಆದೇಶ</u>** ಃಃ

ವಾದಿಯ ದಾವೆಯನ್ನು ವೆಚ್ಚ ಸಹಿತ ಭಾಗಶಃ ಪುರಸ್ಕರಿಸಲಾಗಿದೆ.

ಪ್ರತಿವಾದಿಗಳು ಜಂಟಿಯಾಗಿ ರೂ.4,85,431/- ಗಳನ್ನು ಶೇಕಡಾ 6% ರಂತೆ ದಿನಾಂಕ 20.12.2023 ರಿಂದ ಪ್ರತಿವಾದಿಯವರು ಸಂದಾಯ ಮಾಡುವ ದಿನಾಂಕದವರೆಗೆ ರೂ.4,85,431/- ಗಳನ್ನು ಶೇಕಡಾ 6% ರಂತೆ

ವಾದಿಯವರಿಗೆ 2 ತಿಂಗಳಲ್ಲಿ ಪಾವತಿಸಬೇಕೆಂದು ಆದೇಶಿಸಲಾಗಿದೆ. ಹಾಗೇನಾದರೂ ನೀಡದಿದ್ದಲ್ಲಿ ವಾದಿಯವರು ಕಾನೂನಿನ ಅನುಗುಣವಾಗಿ ಪಡೆದುಕೊಳ್ಳಬೇಕೆಂದು ಆದೇಶಿಸಲಾಗಿದೆ.

ತೀರ್ಪಿನಂತೆ ಡಿಕ್ರಿ ಬರೆಯಿರಿ.

(ಈ ತೀರ್ಪನ್ನು ಶೀಘ್ರಲಿಪಿಗಾರರಿಗೆ ನೇರವಾಗಿ ಗಣಕಯಂತ್ರದಲ್ಲಿ ಉಕ್ತಲೇಖನ ನೀಡಿ, ಅವರು ಬೆರಳಚ್ಚು ಮಾಡಿದ ಮೇಲೆ ತಿದ್ದುಪಡಿಗಳನ್ನು ಪರಿಶೀಲಿಸಿ ದಿನಾಂಕ 24 ನೇ ಮಾರ್ಚ್ 2026 ರಂದು ತೆರೆದ ನ್ಯಾಯಾಲಯದಲ್ಲಿ ತೀರ್ಪನ್ನು ಉಚ್ಚರಿಸಿದ್ದೇನೆ.)

VIJAYKUMAR N
Digitally signed by VIJAYKUMAR N
Date: 2026.06.03 18:09:18 +0530

(ಶ್ರೀ. ವಿಜಯಕುಮಾರ. ಎನ್)
ಹೆಚ್ಚುವರಿ ದಿವಾಣಿ ನ್ಯಾಯಧೀಶರು ಹಾಗೂ
ಜೆ.ಎಂ.ಎಫ್.ಸಿ., ರೋಣ.

ಅನುಸೂಚಿ

ವಾದಿಯ ಪರವಾಗಿ ವಿಚಾರಣೆಗೆ ಒಳಪಡಿಸಿದ ಸಾಕ್ಷಿದಾರರ ಪಟ್ಟಿ:

ವಾದಿ ಪರ ಸಾಕ್ಷಿ 1- ಭೂಶಯ್ಯ ಸೈದುಲ್ಲು ಕೊಯ

ವಾದಿಗಳ ಪರವಾಗಿ ಗುರುತಿಸಲಾದ ದಾಖಲೆಗಳು :

ನಿಪಿ-1	ಸಾಲದ ಅರ್ಜಿ ಪತ್ರ
ನಿಪಿ-2	ಕರಾರು ಪತ್ರ
ನಿಪಿ-3	ಜಾಮೀನುದಾರರ ಅರ್ಜಿ
ನಿಪಿ-4	1 ನೇ ಪ್ರತಿವಾದಿಗೆ ಹಣ ನೀಡಿದ ಬಗ್ಗೆ ರಶೀದಿ
ನಿಪಿ-5-6	ಎರಡು ಸಾಲದ ತಿರುವಳಿ ಪತ್ರಗಳು

ನಿಪಿ–7 ಕಾನೂನು ತಿಳುವಳಿಕೆ ಪತ್ರ

ನಿಪಿ–8–9 ಅಂಚೆ ರಶೀದಿ

ನಿಪಿ–10 1 ನೇ ಪ್ರತಿವಾದಿಯವರ ತಖ್ತೆ

ನಿಪಿ–11 ಪತ್ರಿಕಾ ಪ್ರಕಟಣೆ.

ಪ್ರತಿವಾದಿಯ ಪರವಾಗಿ ವಿಚಾರಣೆಗೆ ಒಳಪಡಿಸಿದ ಸಾಕ್ಷಿದಾರರ ಪಟ್ಟಿ :

–ಇಲ್ಲ –

ಪ್ರತಿವಾದಿಗಳ ಪರವಾಗಿ ಗುರುತಿಸಲಾದ ದಾಖಲೆಗಳು :

– ಇಲ್ಲ –

VIJAYKUMAR N Digitally signed by VIJAYKUMAR N
Date: 2026.06.03 18:09:35 +0530

ಹೆಚ್ಚುವರಿ ದಿವಾಣಿ ನ್ಯಾಯಧೀಶರು ಹಾಗೂ

ಜೆ.ಎಂ.ಎಫ್.ಸಿ., ರೋಣ.